ಬರೆದಿದ್ದೇನೆ. ಅಂಚೆ ಇಲಾಖೆಗೆ 150 ವರ್ಷ ತುಂಬಿದಾಗ ಆರ್‌ಎಂಎಸ್‌ನ ಕುರಿತು, ಜನರಲ್ ತಿಮ್ಮಪ್ಪಯ್ಯನವರ ಶತಮಾನೋತ್ಸವ ಸಂದರ್ಭ... ಹೀಗೆ ಹಲವಾರು ಸಾಂದರ್ಭಿಕ ಲೇಖನಗಳನ್ನು ಬರೆದೆ. ಕಥೆ ಬರೆಯಲು ಹೊರಟಾಗಲೆಲ್ಲಾ ಲಂಕೇಶ್‌ರ ಕಚೇರಿಯ ಧೂಮಲೀಲೆ, ಅವರ ಮಾತುಗಳು ಎಲ್ಲವೂ ಕಣ್ಣ ಮುಂದೆ ಬರುತ್ತಿರುತ್ತದೆ. ಆದರೆ ಅಂದು ಲಂಕೇಶ್‌ಗೆ ಕೊಟ್ಟಿದ್ದ ಕಥೆ ಮೂವತ್ತು ವರ್ಷಗಳ ನಂತರ 'ಮಯೂರ'ದಲ್ಲಿ ಪ್ರಕಟವಾಯಿತು.



◆ **ದಶಕಗಳಿಂದ ಅನುವಾದದಲ್ಲಿ ತೊಡಗಿಸಿಕೊಂಡಿದ್ದೀರಿ. ಅನುವಾದಕ್ಕೆ ಬಂದ ಅತ್ಯುತ್ತಮ ಪ್ರತಿಕ್ರಿಯೆ ಯಾರಿಂದ?**

ನನ್ನ ಅನುವಾದವನ್ನು ಮೆಚ್ಚಿಕೊಂಡವರಲ್ಲಿ ನನ್ನ ಸಹೋದ್ಯೋಗಿ ಮಿತ್ರ ನಮ್ಮ ನೌಕರರ ಸಂಘದ ನಾಯಕರಾಗಿದ್ದ ಕಾಮ್ರೇಡ್ ಜಿ.ಎಸ್. ನಾಗೇಂದ್ರ, ವಿಮರ್ಶಕಿ ಎಂ.ಎಸ್. ಆಶಾದೇವಿ, ಎಸ್.ಆರ್. ವಿಜಯಶಂಕರ, ಡಾ. ಮೋಹನ್ ಕುಂಟಾರ್, ಶಾ.ಮಂ. ಕೃಷ್ಣರಾಯ ಮುಂತಾದವರಿದ್ದಾರೆ.

◆ **ವಿವಿಧ ಭಾಷೆಗಳಿಂದ ಕನ್ನಡಕ್ಕೆ ಸಾಕಷ್ಟು ಕೃತಿಗಳು ಅನುವಾದಗೊಳ್ಳುತ್ತಿವೆ. ಇದೇ ರೀತಿ ಕನ್ನಡದಿಂದ ಬೇರೆ ಭಾಷೆಗಳಿಗೆ ಅನುವಾದ ನಡೆಯುತ್ತಿದೆಯೇ? ನಿಮ್ಮ ಅನುಭವದಲ್ಲಿ ಹೇಳುವುದಾದರೆ ಕನ್ನಡದಿಂದ ಮಲಯಾಳಂಗೆ ಅನುವಾದಗೊಳ್ಳುತ್ತಿರುವ ಕೃತಿಗಳ ಪ್ರಮಾಣ ಎಷ್ಟಿದೆ?**

ಮಲಯಾಳಂ-ಕನ್ನಡ ಅನುವಾದಕರಾಗಿ ಹೇಳುವುದಾದರೆ, ಮಲಯಾಳಂನಿಂದ ಒಂದು ಸಾವಿರಕ್ಕಿಂತಲೂ ಹೆಚ್ಚಿನ ಕಥೆಗಳು ಪತ್ರಿಕೆಗಳಲ್ಲಿ, ಪುಸ್ತಕ ರೂಪದಲ್ಲಿ ಪ್ರಕಟಗೊಂಡಿವೆ. ಇದಕ್ಕೆ ಬಹುಮುಖ್ಯ ಕಾರಣ, ಇಲ್ಲಿನ ಪತ್ರಿಕೆಗಳು ಮತ್ತು ಪ್ರಕಾಶಕರು. ಅವರಿಗೆಲ್ಲ ನಾವು ಅನುವಾದಕರು ಕೃತಜ್ಞರಾಗಿರಬೇಕು. ಆದರೆ ಕನ್ನಡದಿಂದ ಮಲಯಾಳಂಗೆ ಅನುವಾದವಾಗುವ ಕೃತಿಗಳು ತೀರಾ ಕಡಿಮೆ. ಕರ್ನಾಟಕದಲ್ಲಿರುವ ಮಲಯಾಳೀ ಭಾಷಿಕರು ಕನ್ನಡ ಕಲಿಯುವ ಗೋಜಿಗೆ ಹೋಗುವುದು ಕಡಿಮೆ. ಕನ್ನಡದಿಂದ ಮಲಯಾಳಂಗೆ ಅನುವಾದಿಸುವ ಸಾಮರ್ಥ್ಯವುಳ್ಳವರು ಕೆಲವರಿದ್ದಾರೆ. ಮಲಯಾಳಂ ಪತ್ರಿಕೆಗಳು/ಪ್ರಕಾಶಕರು ಅವರ ಕೃತಿಗಳನ್ನು ಪ್ರಕಟಿಸಲು ಹಿಂಜರಿಯುತ್ತಾರೆ. ಅಂದರೆ ಪ್ರೋತ್ಸಾಹ ಇಲ್ಲವೆಂದೇ ಹೇಳಬೇಕು. ಒಂದು ಅಂದಾಜಿನ ಪ್ರಕಾರ, ಬೆಂಗಳೂರಿನಲ್ಲಿ 12ರಿಂದ 14 ಲಕ್ಷ ಮಲಯಾಳಿಗಳಿದ್ದಾರೆ. ಅವರು ಇಲ್ಲಿರುವ ಎಲ್ಲ ಸವಲತ್ತುಗಳನ್ನು ಬಳಸಿಕೊಳ್ಳುತ್ತಾರೆ. ಹೊಟ್ಟೆಪಾಡಿಗೋಸ್ಕರ ಬಂದು, ಕೆಲಸ, ಸೈಟು, ಮನೆ, ಮದುವೆ, ಮಕ್ಕಳು ಎಲ್ಲವನ್ನೂ ಅವರು ಸಂಪಾದಿಸುತ್ತಾರೆ. ಆದರೆ ಐವತ್ತು ವರ್ಷಗಳಾದರೂ ಅವರು ಕನ್ನಡ ಕಲಿಯಲಾರರು. ಬೆಂಗಳೂರಿನಲ್ಲಿಯೇ ಸುಮಾರು 40-60 ಮಲಯಾಳೀ ಸಂಘಟನೆಗಳಿವೆ. ಅವರಿಗೆ ಬೇಡದಿರುವುದು ಕನ್ನಡ ಮಾತ್ರ. ಹಾಗೆಂದು ಸಾರಾಸಗಟಾಗಿ ಹೇಳಲು ಬರುವುದಿಲ್ಲವಾದರೂ ವಾಸ್ತವ ಹೆಚ್ಚು ಭಿನ್ನವಾಗಿಯೇನೂ ಇಲ್ಲ. ಅಲ್ಲೊಬ್ಬರು ಇಲ್ಲೊಬ್ಬರು ಕನ್ನಡ ಕಲಿತವರು ಇದ್ದಾರೆ. ಕನ್ನಡದಿಂದ ಮಲಯಾಳಂಗೆ ಅನುವಾದಿಸುವ ಸಾಮರ್ಥ್ಯವಿರುವವರು ಕೆಲವರಿದ್ದಾರೆ. ಮಲಯಾಳಂ ಪತ್ರಿಕೆಗಳು/ ಪ್ರಕಾಶಕರು ಅವರ ಕೃತಿಗಳನ್ನು ಪ್ರಕಟಿಸಲು ಹಿಂಜರಿಯುವುದರಿಂದ ಅವರಿಗೆ ಪ್ರೋತ್ಸಾಹ ದೊರೆಯುತ್ತಿಲ್ಲ.